ಆಹ್ವಾನದ ಮೇಲೆ ಶಾಸಕರೇ ಹೋದರೂ ಕೂಡ ಅಧಿಕಾರಗಳೇ ಬಂದಿರುವುದಿಲ್ಲ. ಬರೀ ನಾವೇ ಹೋಗಿ ಏನು ಮಾಡುವುದು? ಏನು ತೊಡಕಿದೆ, ಹೇಗೆ ಮಾಡಂವುದು ಎಂಬುದನ್ನು ಹೇಳದೇ ಹೋದರೆ ಹೇಗೆ? ಈ ಥರವಾಗಿ ಈ ಸಭೆಗಳು ಅರ್ಥ ಕಳೆದು ಕೊಳ್ಳುತ್ತಿದೆ. ಆದ್ದರಿಂದ ಈ ಬಗ್ಗೆ ಸಮಗ್ರವಾದ ನೀತಿ ನಿಯಮಾವಳಿಯನ್ನು ರೂಪಿಸಿ ಅದರಂತೆ ಅಧಿಕಾರಿಗಳ ಕೈಯಲ್ಲಿ ನೀವು ಕೆಲಸ ಮಾಡಿಸುವುದಾದರೆ ಉದ್ದೇಶವೂ ಈಡೇರಿ, ಜನತೆಗೂ ನಿಮ್ಮ ಬಗ್ಗೆ ಒಳ್ಳೆಯ ಭಾವನೆ ಬಂದು ನಿಮಗೆ ಕೀರ್ತಿಯೂ ಸಿಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗಾಗಲೇ ನಿಯಮಾವಳಿ ಮಾಡಿದೆ. ಆದೇಶವನ್ನೂ ಕೊಟ್ಟಿದೆ. ಮೀರಿ ನಡೆದಿರುವ ಅಧಿಕಾರಗಳ ಮೇಲೆ ಕ್ರಮ ಕೈಗೊಳ್ಳುತ್ತೇನೆ.

ಬಂಟ್ವಾಳದ ಗುರುಪುರ ಫಿರ್ಕಾದಲ್ಲಿ ವಿದ್ಯುತ್ ಪೂರೈಕೆಯಲ್ಲಾಗಿರುವ ಕಡಿಮೆ ವೋಲ್ಟೇಜ್ ಬಗ್ಗೆ.

೧೧೭೬. ಶ್ರೀ ರಾಮನಾಥ ರೈ (ಬಂಟವಾಳ).—ಮಾನ್ಯ ವಿದ್ಯುತ್ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಂಟ್ವಾಳದ ಗುರುಪುರ ಫಿರ್ಕಾದಲ್ಲಿ ವಿದ್ಯುತ್ ಪೂರೈಕೆಯಲ್ಲಾಗಿರುವ ಕಡಿಮೆ ವೋಲ್ಟೇಜ್ ನಿಂದಾಗಿ ಕೃಷಿಗಾರರಿಗೆ ಬಹಳ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರದವರು ಕೃಷಿಗಾರರಿಗೆ ಬೇಕಾಗುವಷ್ಟು ವಿದ್ಯುತ್‌ನ್ನು ಒದಗಿಸುವರೆ?

ಶ್ರೀ ಜೆ. ಎಸ್. ದೇಶಮುಖ್ (ವಿದ್ಯುತ್ ಗಣಿ ಮತ್ತು ಭೂ-ವಿಜ್ಞಾನ ಮಂತ್ರಿಗಳು).—

ಅ) ಬಂಟ್ವಾಳದ ಗುರುಪುರ ಫಿರ್ಕಾದಲ್ಲಿ ಕಡಿಮೆ ವೋಲ್ಟೇಜ್ ಇರುವುದು ನಿಜ. ಗುರುಪುರ ಫಿರ್ಕಾಕ್ಕೆ ಮಂಗಳೂರಿನ ಕಂಲಶೇಖರದಿಂದ ಬರುವ ೧೧ ಕೆ ವಿ. ಗ್ರಾಮೀಣ ಫೀಡರ್ ಸುಮಾರು ೨೬ ಕಿ. ಮೀಟರ್ ಉದ್ದವಾಗಿದ್ದು ಗುರುಪುರ ಫಿರ್ಕಾವು ಈ ಲೈನಿನ ಕೊನೆ ತುದಿಯಲ್ಲಿದೆ. ಈ ಫೀಡರು ತುಂಬಾ ಉದ್ದವಾಗಿರುವುದರಿಂದಲೂ ಗ್ರಾಮೀಣ ಫೀಡರಾದುದರಿಂದ ನೀರಾವರಿ ಪಂಪುಸೆಟ್ಟುಗಳ ಲೋಡ್ ಅಧಿಕವಾಗಿರುವುದರಿಂದಲೂ ವೋಲ್ಟೇಜ್ ಕಡಿಮೆ ಇದೆ.

ಆ) ಪರಿಸ್ಥಿತಿ ಉತ್ತಮಪಡಿಸುವ ಸಲುವಾಗಿ ಈ ಫಿರ್ಕಾಕ್ಕೆ ವಿದ್ಯುತ್ ಸರಬರಾಜನ್ನು ಮಂಗಳೂರು ಬದಲು ಬಂಟ್ವಾಳ ಸ್ಟೇಷನ್‌ನಿಂದ ಕೊಡಲು ಆಲೋಚಿಸಿದ್ದು ಇದಕ್ಕಾಗಿ ಬೇಕಾಗುವ ೪ ಕಿ.ಮೀ. ಲಿಂಕ್ ಲೈನನ್ನು ಹಾಕಲಾಗುತ್ತಿದೆ. ಈಗಾಗಲೇ ೨ ಕಿ.ಮೀ. ಲೈನ್ ಹಾಕಲಾಗಿದ್ದು ಬಾಕಿ ಕೆಲಸ ಇನ್ನು ೩ ತಿಂಗಳೊಳಗೆ ಪೂರೈಸುವ ಗುರಿಯಿದೆ ಇದಾದ ನಂತರ ವೋಲ್ಟೇಜ್ ಸ್ಥಿತಿ ಉತ್ತಮಗೊಳ್ಳುತ್ತದೆ ಪುತ್ತೂರಿನಲ್ಲಿ ಸ್ಥಾಪಿಸುತ್ತಿರುವ ೧೧೦ ಕೆ.ವಿ. ಸ್ಟೇಷನ್ ಆದ ಮೇಲೆ ಪರಿಸ್ಥಿತಿ ಇನ್ನು ಸುಧಾರಿಸುತ್ತದೆ.

ಶ್ರೀ ರಾಮನಾಥ ರೈ.—ನಾನು ಬಂಟ್ವಾಳ ಕ್ಷೇತ್ರದ ಗುರುಪುರ ಫಿರ್ಕಾ ಎಂದು ಕೇಳಿದ್ದೆ. ಆದರೆ ಉತ್ತರದಲ್ಲಿ ಗುರುಪುರ ಫಿರ್ಕಾ ತಾಲ್ಲೂಕು ಎಂದು ತಪ್ಪಾಗಿ ಅಭಿಪ್ರಾಯ ಪಡಲಾಗಿದೆ. ಏಕೆಂದರೆ ಈ ಗುರುಪುರ ಫಿರ್ಕಾ ಮಂಗಳೂರು ತಾಲ್ಲೂಕಿನಲ್ಲಿದೆ, ಆದರೆ ಬಂಟ್ವಾಳ ಕ್ಷೇತ್ರಕ್ಕೆ ಬರುತ್ತದೆ. ಆದ್ದರಿಂದ ಈ ತಪ್ಪು ಅಂಶದ ಮೇಲೆ ನೀವು ಸೂಚಿಸಿರುವ ಕ್ರಮ ಸಮರ್ಪಕ ಸತ್ಯವಲ್ಲ. ಆದ್ದರಿಂದ ಸರಿಯಾದ ಮಾಹಿತಿ ಕೊಡುವಿರಾ?

ಶ್ರೀ ಜೆ.ಎಸ್. ದೇಶಮುಖ್.—(ನಿಶ್ಶಬ್ದ)

ಶ್ರೀ ಯು. ಭೂಪತಿ—ಇವರಿಗೆ ಟೆನ್‌ಷನ್ನೇ ಇಲ್ಲವಲ್ಲ, ಸ್ವಾಮಿ.

ಶ್ರೀ ಜೆ.ಎಸ್. ದೇಶಮುಖ್.— ಆದಷ್ಟು ಬೇಗ ಒದಗಿಸಿಕೊಡುವ ವ್ಯವಸ್ಥೆ ಮಾಡುತ್ತೇನೆ.

ಶ್ರೀ ರಾಮನಾಥ ರೈ.—ನಾನು ಕೇಳಿದ ವಿವರಣೆ ಅವರಿಗೆ ಅರ್ಥವಾಗಲೇ ಇಲ್ಲ. ಉತ್ತರವನ್ನೂ ಕೊಡಲಿಲ್ಲವಲ್ಲ, ಅಧ್ಯಕ್ಷರೇ.

ಅಧ್ಯಕ್ಷರು.—ನೀವು ಈಗ ಕೂರ್ರಿ, ಆಮೇಲೆ ಅವರ ಪಕ್ಕದಲ್ಲಿ ಹೋಗಿ ಕೂತು ಮಾತನಾಡಿ ಕೆಲಸ ಮಾಡಿಸಿಕೊಳ್ಳಿ.